ಶ್ರೀ ಕುಂದೂರು ರುದ್ರಪ್ಪ.—ರಿನರ್ಚ್ ಸ್ಟೇಷನ್ ಪ್ರಾರಂಭವಾಡುವುದಕ್ಕೆ ಸರಕಾರ ಮನಸ್ಸು ಮಾಡಿದ್ದರೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಯೋಚನೆಮಾಡ ಬೇಕಾಗುತ್ತದೆ.

Sri G. SIVAPPA.—May I know, Sir, whether it is a fact that the production of arecanut in our State is not self-sufficient ?

Sri H. S. RUDRAPPA.—Mysore State is self-sufficient. We are exporting a large quantity.

Mr. SPEAKER.—Question time is over.

ಒಬ್ಬ ಸದಸ್ಯರು.—ಪ್ರಶ್ನೆ ಕೇಳಲು ನನಗೆ ಅವಕಾಶ ದೊರೆಯಲಿಲ್ಲ. ಇನ್ನೂ ಹೆಚ್ಚು ಅವಧಿಯನ್ನು ಪ್ರಶ್ನೆ ಕೇಳುವದಕ್ಕೆ ಕೊಡಬೇಕು. ಇದೊಂದು ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು.—ಈ ಪ್ರಶ್ನೆಗೆ ಸಾಕಷ್ಟು ಕಾಲವನ್ನು ನಾನು ಕೊಟ್ಟಿದ್ದೇನೆ.

ಶ್ರೀ ಎ. ಮುನಿಯಪ್ಪ.—ಸ್ವಾಮಿ, 26ನೇ ತಾರೀಖಿನ ದಿನ ಗುಡಿಬಂಡೆ-ಬಾಗೇಪಲ್ಲಿಯಲ್ಲಿ ಹರಿಜನರ ಬಾವಿಯ ಬಗ್ಗೆ ಒಂದು ಪ್ರಶ್ನೆ ಕಳುಹಿಸಿದ್ದೇನೆ. ಎಂಟು ಹತ್ತು ದಿವಸವಾದರೂ ಮಂತ್ರಿಗಳು ಅದಕ್ಕೆ ಉತ್ತರ ಕೊಟ್ಟಿಲ್ಲ. ಅದನ್ನು ಈಗ ಅವರು ಹೇಳುವರೋ ?

ಅಧ್ಯಕ್ಷರು.—ಇಲ್ಲಿ ಈಗ ಆ ಪ್ರಶ್ನೆ ಬರುವುದಿಲ್ಲ. ನೀವು ಏನಾದರೂ ಕೇಳುವುದಿದ್ದರೆ ಮೊದಲು ನನ್ನ ಹತ್ತಿರ ಬಂದು ನನಗೆ ಹೇಳಬೇಕು. ಮತ್ತು ಸಭೆಯಲ್ಲಿ ಕೇಳುವುದಕ್ಕೆ ಅವಕಾಶ ಕೊಡಬೇಕೆಂದು ನನ್ನ ಚೇಂಬರಿನಲ್ಲಿ ಮೊದಲು ನನ್ನನ್ನು ಕಂಡು ಕೇಳಿಕೊಳ್ಳಬೇಕ . ನಾನು ಒಪ್ಪಿದಮೇಲೆ ಅನಂತರ ಅಂಥ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಮಾಡಬೇಕು. ಆಗ ಅವಕಾಶ ಕೊಡುತ್ತೇನೆ.

ಶ್ರೀ ಎ. ಮುನಿಯಪ್ಪ.—ಸ್ವಾಮಿ, ಇದು ನನ್ನ ಸ್ವಂತದ ವಿಷಯವಲ್ಲ, ಸಾರ್ವಜನಿಕ ವಿಷಯವಾಗಿದೆ.

ಅಧ್ಯಕ್ಷರು.—ಸಭೆಯಲ್ಲಿ ಬರತಕ್ಕದ್ದೆಲ್ಲಾ ಸ್ವಂತದ ಪ್ರಶ್ನೆಯಿರುವದಿಲ್ಲ. ಎಲ್ಲಾ ಸಾರ್ವಜನಿಕ ಪ್ರಶ್ನೆಗಳೇ ಬರುತ್ತವೆ. ಆದಕಾರಣ ಮೊದಲು ನನಗೆ ಹೇಳಿ, ಇಂಥ ವಿಷಯವನ್ನು ಸಭೆಯಲ್ಲಿ ಎತ್ತುವದಕ್ಕೆ ಕೇಳಿಕೊಳ್ಳಬೇಕು. ನಾನು ಅವಕಾಶಕೊಡುತ್ತೇನೆ. ಆಮೇಲೆ ಸಭೆಯಲ್ಲಿ ಕೇಳಬಹುದು. ಇಲ್ಲದಿದ್ದರೆ ಗೊಂದಲವಾಗುತ್ತದೆ.

Sri C. J. MUCKANNAPPA.—Sir, I want to ask whether it is fair on the part of the Government to discriminate between Member and Member when the Assembly is in Session. If a distinguished guest comes to Mysore, the Government invite a few legislators for State dinner and they have discriminated between Member and Member. May I know.....

ಅಧ್ಯಕ್ಷರು.—ಇಂಥ ಪ್ರಶ್ನೆಯನ್ನು ಸಭೆಯಲ್ಲಿ ಪ್ರಸ್ತಾಪಿಸುವುದಕ್ಕಿಂತ ಮೊದಲುನನಗೆ ತಿಳಿಸಬೇಕು. ನಾನು ಒಪ್ಪಿದಮೇಲೆ ಸಭೆಯಲ್ಲಿ ತರಬೇಕು.

PAPER LAID ON THE TABLE.

Sri H. S. RUDRAPPA (Minister for Agriculture).—Sir, I beg to lay on the Table, the Mysore Legislature Travelling Allowance Rules,1957, issued under section 15 of the Mysore Legislature Salaries Act, 1956.

ADJOURNMENT MOTION

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಹತ್ತು ಹದಿನೈದು ದಿವಸಗಳ ಹಿಂದೆ ನಾನು ಕೇಳಿದ್ದ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಸಂಬಂಧಪಟ್ಟ ಒಂದು ವಿಷಯ ತಮ್ಮ ಮುಂದಿದೆ. ಅದಲ್ಲದೆ ಒಂದು ನಿಲುವಳಿ ಸೂಚನೆಯನ್ನೂ ಸಹ ಕೊಟ್ಟಿದ್ದೇನೆ. ದೇಶದ ಮುಂದಿರುವ ಪ್ರಾಮುಖ್ಯವಾದ ವಿಷಯ ಇದು ಆಗಿರುವುದರಿಂದ ತಡವಾಗದಂತೆ ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. Yesterday I have sent another adjournment motion regarding Police excesses, ಅಂದರೆ ಹಿಂಸಾತ್ಮಕ ಕೃತಿಗಳ ಬಗ್ಗೆ ಕಳಿಸಿದ್ದೇನೆ. ಇದು ದೊಡ್ಡ ಮತ್ತು ಬೃಹತ್ ಸಮಸ್ಯೆ, ಇಂಥಾ ವಿಷಯವನ್ನು ಸಭೆಯ ಮುಂದೆ ತರುವುದಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೆ ಹಾಕುತ್ತಿರುವುದು ಸರಿಯಲ್ಲ.

ಅಧ್ಯಕ್ಷರ .—ನೀವು ಕಳಿಸಿದ adjournment motion ಇದೆ. ಮುನಿಯಮ್ಮನ ಪ್ರಕರಣದ ಬಗ್ಗೆ ನಿಮ್ಮ ಪಕ್ಷದ ಹೇಳಿಕೆಗಳಿಗೆ ಸಮರ್ಥನೆ ಮಾಡುವುದಕ್ಕೆ authorities ತಂದುಕೊಡುತ್ತೇನೆಂದು ನೀವೇ ಹೇಳಿದ್ದೀರಿ. ಅದನ್ನು ನೀವು ಇನ್ನೂ ನನಗೆ ತಂದು ಕೊಟ್ಟಿಲ್ಲ. ಅದಕ್ಕೆ ತಡವಾಗಿದೆ.

VOTING OF DEMANDS FOR ADDITIONAL GRANTS FOR 1957-58.

Mr. SPEAKER.—In this connection, I would like to inform the House that all the Demands are before this House and Members may speak on all of them.

Sri M. C. NARASIMHAN (Kolar Gold Fields).—Sir, I have a representation to make. So far as these demands are concerned, on going through the notes submitted, we find that unfortunately they are not sufficiently detailed. So, we are not